ಶ್ರೀ ಬಿ.ಎ. ಮೊಹಿದ್ದೀನ್.—ಸಮಿತಿಯವರು ಯಾವಾಗ ವರದಿ ಕೊಡುತ್ತಾರೆ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ವರದಿ ಕೊಟ್ಟಿದ್ದಾರೆ, ಅದು ಸರ್ಕಾರದ ಪರಿಶೀಲನೆಯಲ್ಲಿದೆ.

Strength of the Students in Upper Primary School at Halli Mysore, Holenarasipur Taluk.

704. SRI H. D. DEVEGOWDA (Holenarasipur).—Will the Minister for Education be pleased to state.—

(*a*) the number of Children studying in the Higher Primary School, Halli Mysore Town in Holenarasipur Taluk ;

(*b*) whether it is a fact that this Primary School is being run in four different buildings for last several years ;

(*c*) whether it is not a fact that out of which one building has fully come to the collapsing stage and decision has been taken not to run the classes in it and that the classes are being conducted in the remaining there buildings ;

(*d*) whether Government have received representations for construction of a new building suitable for running all the classes in the single building ;

(*e*) as the Halli Mysore is an important town and there are no suitable school buildings whether Governmant propose to take steps to construct a new building suitable for running all the classes in the same building ?

SRI G. B. SHANKAR RAO.—(Minister for Education).—

(*a*) 460.

(*b*) Classes were being conducted in 3 buildings only.

(*c*) One building has completely collapsed. Now classes are being conducted in the remaining two buildings.

(*d*) Yes.

(*e*) According to Government rules Government will give a grant of Rs. 4,500 for a class room. Making use of this grant, the local institutions have to take steps to construct Primary School Buildings.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಕೊಟ್ಟಿರುವ ಉತ್ತರದಲ್ಲಿ ಮೂರು ಕಟ್ಟಡಗಳು ಬಿದ್ದುಹೊಗಿವೆ ಮತ್ತು ನಾಲ್ಕು ನೂರು ಅರವತ್ತು ವಿದ್ಯಾರ್ಥಿಗಳಿದ್ದಾರೆಂದು ಹೇಳಿದ್ದಾರೆ. ಉತ್ತರ ಸ್ವಲ್ಪ ಗೊಂದಲಮಯವಾಗಿದೆ. ಪ್ರಾಥಮಿಕ ಶಾಲೆ ಬೇರೆ, ಉನ್ನತ ಪ್ರಾಥಮಿಕ ಶಾಲೆ ಬೇರೆ. ಉನ್ನತ ಪ್ರಾಥಮಿಕ ಶಾಲೆಗೆ ಹಿಂದೆ ಮಾಧ್ಯಮಿಕ ಶಾಲೆ ಎಂದು ಕರೆಯುತ್ತಿದ್ದರು. ಅದರಲ್ಲಿರುವುದು ನಾಲ್ಕುನೂರು ಅರವತ್ತು ವಿದ್ಯಾರ್ಥಿಗಳು. ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ

–ಈ ಎರಡು ಶಾಲೆಗಳಲ್ಲಿ ೮೬೫ ಮಕ್ಕಳು ಓದುತ್ತಿದ್ದಾರೆ. ಇವರಿಗೆ ಇರುವುದೇ ಮೂರು ಕಟ್ಟಡ. ಅದರಲ್ಲೊಂದು ಬಿದ್ದುಹೋಗಿದೆ. ಇನ್ನು ಎರಡರಲ್ಲಿ ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲೆಯ ಮಕ್ಕಳು ಕುಳಿತು ಓದಲಿಕ್ಕೆ ಸಾಧ್ಯವೆ? ಈ ಕಟ್ಟಡಗಳು ತಾಲ್ಲೂಕು ಬೋರ್ಡಿನವಲ್ಲ. ಹಿಂದೆ ಮಹಾರಾಜರ ಕಾಲದಲ್ಲಿ ಕಟ್ಟಿದ್ದ ಮಾಧ್ಯಮಿಕ ಶಾಲೆಯ ಕಟ್ಟಡ ಬಿದ್ದುಹೋಗಿದೆ. ತಾಲ್ಲೂಕು ಬೋರ್ಡಿನವರನ್ನು ಕೇಳಿದರೆ, ಅದು ನಮ್ಮ ಕಟ್ಟಡವಲ್ಲ, ಅದು ಸರ್ಕಾರದ ಕಟ್ಟಡ, ಇದನ್ನು ಸರ್ಕಾರದವರು ಮಾಡಬೇಕೇ ಹೊರತು ನಾವು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ೮೬೫ ಮಕ್ಕಳು ಎರಡು ಕಟ್ಟಡಗಳಲ್ಲಿ ಕುಳಿತು ಓದುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ಮೂರು ಕಟ್ಟಡಗಳನ್ನು ಹರಾಜು ಮಾಡಿಸಿದರೆ ಸುಮಾರು ೫೦–೬೦ ಸಾವಿರ ರೂಪಾಯಿಗಳು ಬರುತ್ತದೆ. ಅಷ್ಟೆ ಪ್ರಮಾಣದ ಹಣವನ್ನು ಸರ್ಕಾರವೊ ಹಾಕಿ ಒಂದು ಹೊಸ ಶಾಲಾ ಕಟ್ಟಡವನ್ನು ಕಟ್ಟಿಸಬೇಕೆಂದು ಹೇಳಬಯಸುತ್ತೇನೆ.

ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಸದಸ್ಯರು ಪ್ರಾಥಮಿಕ ಶಾಲಾ ಸಮಸ್ಯೆ ಬಗ್ಗೆ ಕೇಳಿದ್ದಾರೆ. ನಾನದಕ್ಕೆ ಉತ್ತರ ಕೊಟ್ಟಿದ್ದೇನೆ. ಕಟ್ಟಡವನ್ನು ಹರಾಜು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿರುವುದಲ್ಲದೆ ಅದರಿಂದ ೫೦ ಸಾವಿರ ರೂಪಾಯಿಗಳು ಬರುತ್ತದೆಂದು ಹೇಳಿದ್ದಾರೆ. ಆದರೆ, ಅಂದಾಜು ಮಾಡಿಸಿದ ಮೇರೆಗೆ ಹರಾಜು ಹಾಕಿದರೆ ಸುಮಾರು ಹನ್ನೆರಡು ಸಾವಿರ ರೂಪಾಯಿಗಳು ಬರಬಹುದೆಂದು ಗೊತ್ತಾಗಿದೆ. ಸರ್ಕಾರ ಒಂದು ಶಾಲಾ ಕೊಠಡಿಗೆ ೪,೫೦೦ ರೂಪಾಯಿಗಳನ್ನು ನೀಡುತ್ತದೆ. ಸಾರ್ವಜನಿಕರೂ ಸಹ ಅಷ್ಟೇ ಪ್ರಮಾಣದಲ್ಲಿ ಮುಂದೆ ಬಂದರೆ ಒಳ್ಳೆಯದು. ಶಾಲಾ ಕಟ್ಟಡದ ಬಗ್ಗೆ ಸಹಾಯಕ ಶಿಕ್ಷಣ ಅಧಿಕಾರಿಗೆ ಅಂದಾಜು ಕಳುಹಿಸಿಕೊಡಲು ತಿಳಿಸಲಾಗಿದೆ. ಹಣದ ಪೂರ್ಕೈಕಯನ್ನು ನೋಡಿಕೊಂಡು ಅಲ್ಲಿ ಕಟ್ಟಡ ಕಟ್ಟಿಸಲಿಕ್ಕೆ ಪ್ರಯತ್ನಿಸಲಾಗುವುದೆಂದು ಭರವಸೆ ಕೊಡಬಯಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಹರಾಜು ಹಾಕಿದರೆ ಹನ್ನೆರಡು ಸಾವಿರ ರೂಪಾಯಿ ಬರುತ್ತದೆನ್ನುವುದು ಈಗಾಗಲೇ ಬಿದ್ದುಹೋಗಿರುವ ಕಟ್ಟಡದ್ದು. ಇದು ಮತ್ತು ಇನ್ನುಳಿದ ಎರಡು ಕಟ್ಟಡಗಳನ್ನು ಸೇರಿಸಿ ಹರಾಜು ಮಾಡಿದರೆ ಸುಮಾರು ೫೦–೬೦ ಸಾವಿರ ರೂಪಾಯಿ ಬರುತ್ತದೆ. ಈ ಕಟ್ಟಡಗಳು ಊರೊಳಗಿವೆ. ಅಲ್ಲಿ ಹೆಚ್ಚು ಬೆಲೆ ಇದೆ. ಅಲ್ಲದೆ, ಹೊಸ ಕಟ್ಟಡ ಕಟ್ಟಿಸಲಿಕ್ಕೆ ಸಾಕಷ್ಟು ಜಾಗವಿದೆ. ಹರಾಜಿನಿಂದ ಬರುವ ಹಣದ ಜೊತೆಗೆ ಸರ್ಕಾರವೂ ಅಷ್ಟೇ ಪ್ರಮಾಣದಲ್ಲಿ ಹಣವನ್ನೊದಗಿಸಿ ಅಲ್ಲಿ ೮೬೫ ಮಕ್ಕಳು ಕುಳಿತು ವಿದ್ಯಾಭ್ಯಾಸ ಮಾಡುವುದಕ್ಕೆ ಯೋಗ್ಯ ಶಾಲಾ ಕಟ್ಟಡವನ್ನು ಕಟ್ಟಿಸಲಿಕ್ಕೆ ಪುನರ್ ಪರಿಶೀಲನೆ ಮಾಡಿಸುತ್ತೀರಾ?

ಶ್ರೀ ಜಿ.ಬಿ. ಶಂಕರರಾವ್.—ಹರಾಜು ಹಾಕುವಾಗ ಮಾನ್ಯ ಸದಸ್ಯರೂ ಸಹ ಬಿಡ್ ಮಾಡಿ ನಮಗೆ ಅಷ್ಟು ಹಣ ಒದಗಿಸಿದರೆ ನಮಗೆ ಬಹಳ ಸಂತೋಷ...

ಶ್ರೀ ಮಳ್ಳೂರು ಆನಂದರಾವ್.—ಇಲ್ಲಿ ನೀತಿ ಪ್ರಶ್ನೆ ಇದೆ. ಮಾನ್ಯ ದೇವೇಗೌಡರು ಸರ್ಕಾರಿ ಶಾಲೆ ಬಗ್ಗೆ ಕೇಳಿದ್ದಾರೆ. ಹಳೆಯ ಶಾಲಾ ಕಟ್ಟಡವನ್ನು ಹರಾಜು ಹಾಕಿಸಿ ಹೊಸ ಸರ್ಕಾರಿ ಶಾಲೆಯನ್ನು ಕಟ್ಟಿಸಿಕೊಡಿ ಎಂದು ಹೇಳುತ್ತಿದ್ದಾರೆ. ಅಂತೆಯೇ ಮಾನ್ಯ ವಿದ್ಯಾ ಸಚಿವರು ಆ ಕಟ್ಟಡವನ್ನು ಹರಾಜು ಹಾಕಿಸಲಿಕ್ಕೆ ಹೊರಟಿರುವವರಲ್ಲದೆ ಮಾನ್ಯ ದೇವೇಗೌಡರನ್ನೂ ಬಿಡ್ ಮಾಡಲಿಕ್ಕೆ ಆಹ್ವಾನಿಸುತ್ತಿದ್ದಾರೆ. ಇದು ಸರಿಯಾದ ನೀತಿಯಲ್ಲ.

ಶ್ರೀ ಜಿ.ಬಿ. ಶಂಕರರಾವ್.—ಹಾಗೆಂದು ಅವರು ಹೇಳುತ್ತಿರುವುದು.

ಶ್ರೀ ಮಳ್ಳೂರು ಆನಂದರಾವ್.—ಹಾಗಾದರೆ ವಿಧಾನ ಸೌಧ ಹರಾಜು ಹಾಕಿಸಿರಿ ಎಂದರೆ ನೀವು ಹಾಕಿಸಂತ್ತೀರೇನು? ಸರ್ಕಾರಿ ಪ್ರಾಥಮಿಕ ಶಾಲೆಯ ಪ್ರಶ್ನೆ ಇಲ್ಲಿದೆ. ಅದರ ಕಟ್ಟಡ ದುರವಸೆಯಲ್ಲಿದ್ದರೆ ಅದನ್ನು ಸರಿ ಮಾಡುವುದು ಅಥವಾ ಹೊಸ ಕಟ್ಟಡವನ್ನು ಕಟ್ಟಿಸುವುದು ಸರ್ಕಾರದ ಕರ್ತವ್ಯವಲ್ಲವೆ? ಒಂದು ಕೊಠಡಿಗೆ ೪,೫೦೦ ರೂಪಾಯಿಗಳನ್ನು ಮಾತ್ರ ಸರ್ಕಾರ ಕೊಡುವುದು ತಪ್ಪು. ಆ ಕಟ್ಟಡಕ್ಕೆ ವೆಚ್ಚವಾಗುವ ನೂರಕ್ಕೆ ನೂರರಷ್ಟು ಹಣವನ್ನು ಸರ್ಕಾರ ಒದಗಿಸಿ, ಮಕ್ಕಳ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಡುವುದು ಅದರ ಜವಾಬ್ದಾರಿ. ಆದುದರಿಂದ, ಮಾನ್ಯ ಸಚಿವರು ತಮ್ಮ ನೀತಿಯನ್ನು ತಿಳಿಸಬೇಕು.

ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಸದಸ್ಯರು ಸಮಸ್ಯೆಯನ್ನು ಸರಿಯಾಗಿ ಅರ್ಥ ಮಾಡಿ ಕೊಂಡಿಲ್ಲವೆಂದು ಕಾಣುತ್ತದೆ. ಈಗಿರುವ ಕಟ್ಟಡ ಪ್ರಾಥಮಿಕ ಶಾಲೆಗೆ ಆಷ್ಟೊಂದು ಅನುಕೂಲವಾದ ಕಟ್ಟಡವಲ್ಲ. ಅದು ಹಳೆ ಸರ್ಕಾರಿ ಕಟ್ಟಡ. ಅಲ್ಲಿ ಸ್ಥಳಾವಕಾಶ ಕಡಿಮೆ ಇದೆ. ಅದೇ ಜಾಗದಲ್ಲಿ ಹೊಸ ಕಟ್ಟಡ ಕಟ್ಟಿಸಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ಬಿದ್ದುಹೋಗಿರುವ ಕಟ್ಟಡವನ್ನು ಹರಾಜು ಹಾಕಿ, ಬೇರೊಂದು ವಿಶಾಲವಾದ ಜಾಗದಲ್ಲಿ ಶಾಲಾ ಕಟ್ಟಡವನ್ನು ಕಟ್ಟಿಸಿಕೊಡಿ ಎಂದು ಮಾನ್ಯ ದೇವೇ ಗೌಡರು ಕೇಳುತ್ತಿದ್ದಾರೆ. ಇದು ತಮಗೆ ಅರ್ಥವಾಗಲಿಲ್ಲವೆಂದರೆ ನಾನೇನುಮಾಡಲಿ?

ಶ್ರೀ ಮುಳ್ಳೂರು ಆನಂದರಾವ್.—ನಾನು ಹೇಳುತ್ತಿರುವುದೇನೆಂದರೇ...

ಶ್ರೀ ಹೆಚ್.ಡಿ. ದೇವೇಗೌಡ.—ನೀತಿ ಪ್ರಶ್ನೆ ಬಗ್ಗೆ ಮಾನ್ಯ ಸದಸ್ಯರು ಶಿಕ್ಷಣ ಇಲಾಖೆಯ ಬೇಡಿಕೆ ಸಂದರ್ಭದಲ್ಲಿ ಮಾತನಾಡಲಿ.

ಅಧ್ಯಕ್ಷರು.—ಇದು ಸ್ಥಳೀಯ ಸಮಸ್ಯೆ. ಮಾನ್ಯ ದೇವೇಗೌಡರು ಮಾತನಾಡಬಹುದು.

ಶ್ರೀ ಹೆಚ್.ಡಿ. ದೇವೇಗೌಡ.—ಸರ್ಕಾರದ ನೀತಿ ಏನಿರಬಹುದು ಮಾನ್ಯ ಸದಸ್ಯರು ಶಿಕ್ಷಣ ಇಲಾಖೆ ಬೇಡಿಕೆ ಸಂದರ್ಭದಲ್ಲಿ ಮಾತನಾಡಲಿ. ನಮ್ಮ ಕಷ್ಟ ನಮಗೆ. ಈ ಕಟ್ಟಡವನ್ನು ಯಾವಾಗ ಕಟ್ಟಿದ ರೆಂಬುದು ನಮಗೇ ಗೊತ್ತಿಲ್ಲ. ಶ್ರೀ ಕೃಷ್ಣರಾಜಒಡೆಯರ್ ಅವರ ಕಾಲದಲ್ಲಿ ಕಟ್ಟಿದ್ದಂತೆ. ಅಂದಿಗೆ ಸುಮಾರು ೫೦-೬೦ ಜನಸಂಖ್ಯೆ ಇದ್ದಿತ್ತೇನೋ. ಆದರೆ, ಇಂದು ಅಲ್ಲಿ ಸುಮಾರು ಐದು ಸಾವಿರ ಜನ ಸಂಖ್ಯೆ ಇದೆ. ಈ ಕಟ್ಟಡಗಳು ಊರಿನ ಮಧ್ಯ ಭಾಗದಲ್ಲಿವೆ. ಇವು ಸಣ್ಣ ಕಟ್ಟಡಗಳಾಗಿದ್ದು ಅಲ್ಲಿ ೮೫ ಮಕ್ಕಳು ಕುಳಿತು ಓದುವುದಕ್ಕೆ ಸಾಧ್ಯವಿಲ್ಲ. ಆಲ್ಲಿ ನಿವೇಶನ ಬೆಲೆ ಹೆಚ್ಚು ಇದೆ. ಅವುಗಳನ್ನು ಹರಾಜು ಹಾಕಿಸಿದರೆ ಹೆಚ್ಚಿಗೆ ಹಣ ಬರುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿಯವರು ಮತ್ತು ನಾನು ಖುದ್ದು ಪರಿಶೀಲನೆ ಮಾಡಿದ್ದೇವೆ. ಇದೇ ಊರಿನ ಮೇಲುಗಡೆ ಸುಮಾರು ನಾಲ್ಕೈದು ಎಕರೆ ಭೂಮಿ ಇದೆ. ಅಲ್ಲಿ ಹೊಸ ಕಟ್ಟಡವನ್ನು ಕಟ್ಟಿಸಲು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅಂದಾಜನ್ನು ತರಿಸಿ, ಸರ್ಕಾರ ಪರಿಶೀಲಿಸುವುದೆ?

ಶ್ರೀ ಜಿ.ಬಿ. ಶಂಕರರಾವ್ —ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪುತ್ತೇನೆ, ಅಂದಾಜು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟರೆ, ಅಲ್ಲಿ ಕಟ್ಟಡ ಕಟ್ಟಿಸುವುದಕ್ಕೆ ಪ್ರಯತ್ನ ಮಾಡಲಾಗುವುದೆಂದು ಭರವಸೆ ಕೊಡುತ್ತೇನೆ.

Proposal to construct E.S.I. Hospital, Davanagere

791 SMT. C. NAGAMMA KESHAVAMURTHY (Mayakonda).—Will the Minister for Labour, Small Scale Indnstries, Food and Wakfs be pleased to state: -

(a) was there a prop sal to construct a 60 bed E.S.I. Hospital, Davanagere;

(*b*) if so, whether the land has been purchased; If not, the reasons for the long delay;

(*c*) when will the Hospital construction work will be taken up?

SRI C.M. IBRAHIM (Minister for Labour, Small Scale Industries, Food and Wakfs).—

(a) There is a proposal to construct 50 bedded E.S.I. Hospital at Davanagere.